# ಸಂಬಂಧ ಬೆಸುಗೆಯ ಅನುಬಂಧ

**ಇಂಚರ ಶೆಟ್ಟಿ**
ಉದಯದ 'ಸಿಂಧು ಭೈರವಿ'ಯ ಸಿಂಧು



◆ **ಸಿಂಧು ಬಗ್ಗೆ ಹೇಳಬೇಕು ಅಂದರೆ...**

ಆ ಪಾತ್ರ ತುಂಬ ಶಕ್ತಿಶಾಲಿಯಾಗಿದೆ. ಹೆಣ್ಣುಮಕ್ಕಳಿಗೆ ಸಾಮಾನ್ಯವಾಗಿ ತಮ್ಮ ಪೋಷಕರ ಸುರಕ್ಷತೆಗೆ ಏನಾದರೂ ಮಾಡಬೇಕು ಎನ್ನುವ ತವಕ ಇರುತ್ತದೆ. ಈಗ ಅಪ್ಪ–ಅಮ್ಮನ ಕಾಳಜಿಗಿಂತ ತಮ್ಮ ಭವಿಷ್ಯವನ್ನು ಕಟ್ಟಿಕೊಳ್ಳಬೇಕು ಎನ್ನುವುದು ಪ್ರಧಾನ ಆಗುತ್ತಿದೆ. ಸಿಂಧು ಪಾತ್ರ ಅದಕ್ಕಿಂತ ಭಿನ್ನ. ಇದು ಅಕ್ಕ–ತಂಗಿ ಬಾಂಧವ್ಯ ಹೇಗಿರಬೇಕು ಎನ್ನುವುದನ್ನು ಬಿಂಬಿಸುತ್ತದೆ. ತಂಗಿಯನ್ನು ಅಕ್ಕ ಪೋಷಿಸುವುದು ಸಾಮಾನ್ಯ. ಇಲ್ಲಿ ತಂಗಿ ಅಕ್ಕನನ್ನು ಕಾಪಾಡುತ್ತಾಳೆ. ಪಾತ್ರ ಚೆನ್ನಾಗಿದೆ. ಮಾತ್ರವಲ್ಲ ಅವಳು ಜವಾಬ್ದಾರಿ ಇರುವ ಯುವತಿ.

◆ **ನಿಮ್ಮ ಆಯ್ಕೆಯ ಪಾತ್ರದ ಒಲವು ನಿಲುವುಗಳು ಏನಾಗಿರುತ್ತವೆ?**

ಸೀರಿಯಲ್‌ನಲ್ಲಿ ಪ್ರಭಾವ ಬೀರುವ ಪಾತ್ರವೇ ಆಗಬೇಕು ಎಂದು ಬಯಸುವೆ. ಹೆಚ್ಚಿನ ಮಹಿಳೆಯರು ಧಾರಾವಾಹಿ ನೋಡುತ್ತಾರೆ ಎನ್ನುವ ಲೆಕ್ಕಾಚಾರ ಇದೆ. ಹೀಗಿರುವಾಗ ಪಾತ್ರ ಅಬಲಗೊಳ್ಳಬಾರದು. ವೀಕ್ಷಕರಿಗೆ ಒಳ್ಳೆಯ ಸಂದೇಶ ನೀಡುವ ಅವರಲ್ಲಿ ಪರಿವರ್ತನಾ ಭಾವ ಹುಟ್ಟಿಸುವಂತೆ ಇರಬೇಕು. ಇವತ್ತು ಬಹುತೇಕ ಕುಟುಂಬಗಳಲ್ಲಿ ಸಂಬಂಧಗಳೇ ದ್ವೀಪದಂತೆ ಆಗುತ್ತಿವೆ. ಅಕ್ಕ ಪಕ್ಕದಲ್ಲೇ ಇದ್ದರೂ ಬಾಂಧವರು ಮೊಬೈಲ್ ಹಿಡಿದುಕೊಂಡು ಕೂತಿರುತ್ತಾರೆ. ಪರಸ್ಪರರು ಮಾತನಾಡುವುದೇ ಕಡಿಮೆ ಆಗಿದೆ. ಅದು ತಪ್ಪಿ ಸಂಬಂಧದ ಬೆಸುಗೆ ಬಿಗಿಗೊಳ್ಳಬೇಕು. ಕುಟುಂಬ ಸದಸ್ಯರಿಗೆ ಪ್ರತಿಯೊಬ್ಬ ಸದಸ್ಯೆ ಹೇಗೆ ರಿಸ್ಕ್ ಎದುರಿಸುತ್ತಾಳೆ. ನಾವೆಷ್ಟು ಚೆಂದ ಇರುತ್ತೇವೆ ಎನ್ನುವುದು ಮುಖ್ಯ.

◆ **ಸಂಬಂಧದಲ್ಲಿ ಹುಳಿ ಹಿಂಡುವ ಪಾತ್ರಗಳೇ ಹೆಚ್ಚು ನಿರೂಪಣೆ ಆಗುತ್ತಿವೆ ಎನ್ನುವ ವೀಕ್ಷಕರ ಆಕ್ಷೇಪಕ್ಕೆ ಏನು ಹೇಳುತ್ತೀರಿ?**

ನಾವು ಹೇಗೆ ಕತೆಯನ್ನು ಅರ್ಥ ಮಾಡಿಕೊಳ್ಳುತ್ತೇವೆ ಎನ್ನುವುದರ ಮೇಲೆ ಅದು ನಿರ್ಧಾರವಾಗುತ್ತದೆ. ಸಿನಿಮಾ–ಧಾರಾವಾಹಿಗಳಲ್ಲಿ ಪ್ರತಿನಾಯಕರು ಅಥವಾ ಖಳನಾಯಕರು ಇರಲೇಬೇಕು. ಅವರಿಲ್ಲದೆ ನಾಯಕತ್ವದ ಪಾತ್ರ ಪ್ರಬಲಗೊಳ್ಳಲು ಸಾಧ್ಯ ಇಲ್ಲ. ಮಾತ್ರವಲ್ಲ ಸಮಾಜದಲ್ಲಿ ನಮ್ಮ ನಡುವೆ ಖಳನಾಯಕರೂ ಇರುತ್ತಾರೆ. ಅವರು ನಮ್ಮಲ್ಲೇ ಇರುವಾಗ ನಾವು ಹೇಗೆ ಜಾಗ್ರತೆಯನ್ನು ತೆಗೆದುಕೊಳ್ಳಬೇಕು ಎಂದು ಧನಾತ್ಮಕವಾಗಿ ಆ ವಿಷಯವನ್ನು ಅರ್ಥಮಾಡಿಕೊಳ್ಳಬೇಕು. ನೆಗೆಟಿವ್ ಸ್ವೀಕರಿಸುವ ವೀಕ್ಷಕರು ಇರುತ್ತಾರೆ ಎನ್ನುವುದನ್ನು ನಿರಾಕರಿಸಲಾರೆ. ಆದರೆ ವಿಷಯವನ್ನು ನಾವು ಹೇಗೆ ತೆಗೆದುಕೊಳ್ಳುತ್ತೇವೆ ಎನ್ನುವುದರ ಮೇಲೆ ಅದು ಅವಲಂಬನೆಯಾಗುತ್ತದೆ.

◆ **ಭಾಷಾ ಪ್ರೌಢಿಮೆ ಬೆಳೆಸಿಕೊಂಡಿದ್ದು ಹೇಗೆ?**

ನನ್ನ ಭಾಷೆ ಹೇಗಿದೆಯೋ ಗೊತ್ತಿಲ್ಲ. ಚೆನ್ನಾಗಿದೆ ಎನ್ನುವುದಾದರೆ, ಅದಕ್ಕೆ ಕಾರಣ ನನ್ನ ಗುರುಗಳಾದ ಉಷಾ ಭಂಡಾರಿ. ಅವರು ನನಗೆ ನಟನೆ ಕಲಿಸಿದರು. ನನ್ನ ಧ್ವನಿ ತಿದ್ದುವಿಕೆಯನ್ನೂ ಅವರೇ ಮಾಡಿದ್ದಾರೆ. ನಟ–ನಟಿಯರಿಗೆ 'ಅ' ಕಾರ ಮತ್ತು 'ಹ' ಕಾರಗಳ ಸ್ಪಷ್ಟತೆ ತುಂಬ ಮುಖ್ಯ. ನನಗೆ ಆ ಸಮಸ್ಯೆ ಇರಲಿಲ್ಲ. ಆದರೆ ತುಂಬ ಕಲಾವಿದರಿಗೆ ಆ ತಪ್ಪನ್ನು ಅವರು ತಿದ್ದುತ್ತಾರೆ. ಜೊತೆಗೆ ನಮ್ಮ ಡೈಲಾಗ್ ಹೇಳುವ ರೀತಿಯನ್ನು ಟ್ಯೂನ್ ಮಾಡುತ್ತಾರೆ.

◆ **ಸಿನಿಮಾ ಬಗ್ಗೆ ನಿಮ್ಮ ಕಲ್ಪನೆ?**

ನನಗೆ ವಾಸ್ತವವಾದಿ ಸಿನಿಮಾಗಳು ಇಷ್ಟ. ಸಿನಿಮಾ ಯಾವುದೇ ಆದರೂ ಅದು ನಮ್ಮ ನೈಜ ಬದುಕಿಗೆ ಹತ್ತಿರ ಆಗಬೇಕು ಎಂದು ಬಯಸುತ್ತೇನೆ. ಹಳೆಯ ಅನೇಕ ಸಿನಿಮಾಗಳು ಹಾಗಿವೆ. 'ಹಬ್ಬ' ಸಿನಿಮಾದ 'ಜೇನಿನ ಗೂಡು ನಾವೆಲ್ಲ...' 'ಆಪ್ತಮಿತ್ರ'ದ 'ಅಂಕು ಡೊಂಕು ದಾರಿ ಬ್ಯಾಡ' ಹಾಡುಗಳು ಇಷ್ಟ. ಸಿನಿಮಾ ನೋಡಿದಾಗ ಸಹಜೀವನದ ಸೌಂದರ್ಯ ಗೊತ್ತಾಗಬೇಕು. ಸಿನಿಮಾಗಳಿಂದಲೂ ತುಂಬ ಕಲಿಯುವುದು ಇರುತ್ತದೆ. ರಮೇಶ್ ಅರವಿಂದ ಅವರ 'ಪುಷ್ಪಕ ವಿಮಾನ' ನನ್ನ ಇಷ್ಟದ ಸಿನಿಮಾಗಳಲ್ಲಿ ಒಂದು. ಅಲ್ಲಿ ತಂದೆ ತನ್ನದೇ ಆದ ಆರೋಗ್ಯ ಸಮಸ್ಯೆ ಎದುರಿಸಿದರೂ ಮಗಳನ್ನು ಕಾಪಾಡಬೇಕು ಎನ್ನುವ ಬಯಕೆ ಇದೆ. ಸಿನಿಮಾಗಳು ಸಂಬಂಧವನ್ನು ಪೋಷಿಸಿದರೆ ಚಂದ. ಸಿನಿಮಾಗಳು ಕಮರ್ಷಿಯಲ್ ರೂಪದಿಂದಾಗಿ ಹೆಚ್ಚು ಬಿಲ್ಡಪ್ ಮತ್ತು ಹೊಡೆದಾಟಗಳಿಗೆ ಆದ್ಯತೆ ಕೊಡುತ್ತಿವೆ ಎಂದು ಅನ್ನಿಸುತ್ತದೆ. ನನಗೆ ಸಿನಿಮಾ ಮಾಡಲು ಸದ್ಯ ಇಷ್ಟ ಇಲ್ಲ. ಒಂದು ವೇಳೆ ಸಿನಿಮಾ ಮಾಡುವ ಸಂದರ್ಭ ಬಂದರೆ ವಾಸ್ತವ ನೆಲೆಯ ಕಥೆಯ ಬಗ್ಗೆ ಅಧ್ಯಯನ ಮಾಡುತ್ತೇನೆ. ನಾನೇ ಕಥೆ ಬರೆದರೂ ಜನರಿಗೆ ಸಕಾರಾತ್ಮಕ ಸಂದೇಶ ನೀಡುವೆ.

◆ **ಸೌಂದರ್ಯವನ್ನು ಹೇಗೆ ಕಾಪಾಡುತ್ತೀರಿ?**

ಸದ್ಯ ಎರಡು ಸೀರಿಯಲ್ ಮಾಡುತ್ತಿದ್ದೇನೆ. ತಿಂಗಳೆಲ್ಲ ಚಿತ್ರೀಕರಣದಲ್ಲಿ ಬಿಜಿ ಇರುವುದರಿಂದ ಬಿಡುವು ಸಿಗುವುದಿಲ್ಲ. ತೆಲುಗು ಸೀರಿಯಲ್‌ನಲ್ಲಿ ಕೆಲಸ ಮಾಡುತ್ತಿರುವುದರಿಂದ ಓಡಾಡಬೇಕಾಗುತ್ತದೆ. ಒತ್ತಡ ಹೆಚ್ಚಾಗುವುದರಿಂದ ಆರೋಗ್ಯ ನಿರ್ವಹಣೆ ಸ್ವಲ್ಪ ಕಷ್ಟ ಆಗುತ್ತಿದೆ. ಇರುವ ಸಮಯದಲ್ಲಿಯೇ ಎಲ್ಲವನ್ನೂ ಮಾಡಬೇಕಾಗುತ್ತದೆ. ತಿಂಗಳಿಗೆ ಒಮ್ಮೆ ಕ್ಲೀನಪ್ ಮಾಡಿಸಿಕೊಳ್ಳುತ್ತೇನೆ. ಮನೆಯಲ್ಲಿಯೇ ಸಿಗುವ ವಸ್ತುಗಳನ್ನು ಬಳಸಿ ಸೌಂದರ್ಯ ಸುರಕ್ಷೆ ಮಾಡುತ್ತೇನೆ.

ನೀರು ಚೆನ್ನಾಗಿ ಕುಡಿಯುವುದು ಒಳ್ಳೆಯದು. ಪಾಸಿಟಿವ್ ಯೋಚನೆ ಮತ್ತು ಖುಷಿಯಾಗಿ ಇರಬೇಕು. ಅದೇ ನಮ್ಮ ಸೌಂದರ್ಯವನ್ನು ಸಾಕಷ್ಟು ವೃದ್ಧಿಸುತ್ತದೆ ಎನ್ನುವುದು ನನ್ನ ಅನಿಸಿಕೆ. ಖುಷಿಯಾಗಿ ಇರುವುದರಿಂದ ಆರೋಗ್ಯ, ಚರ್ಮ, ಜೀವನವೂ ಚೆನ್ನಾಗಿರುತ್ತದೆ. ಚಿತ್ರೀಕರಣದ ಸಂದರ್ಭದಲ್ಲಿ ಅಲ್ಲಿನ ಊಟವನ್ನೇ ಮಾಡುತ್ತೇನೆ. ಆದಷ್ಟು ಕಡಿಮೆ ಪ್ರಮಾಣದಲ್ಲಿ ತಿನ್ನುತ್ತೇನೆ. ಮನೆಯಲ್ಲಿ ಪ್ರೊಟೀನ್ ಇರುವ ಆಹಾರ ಹೆಚ್ಚು ಸೇವಿಸುತ್ತೇನೆ.

■ **ರಾಘವೇಂದ್ರ ಕೆ.**